ಮೊನ್ನೆ ಬಂದಿದ್ದು ವಿಶ್ವನಾಥ್‌ರವರು ನನ್ನ ಕೂಡ ಮಾತನಾಡಿದರು. ಏನಾದರೂ problems ಇದ್ದರೆ ಅವನ್ನು ಮಾತನಾಡಿ ಪರಿಹಾರ ಮಾಡೋಣ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಶ್ರೀ ಮಹಾಲಿಂಗಪ್ಪ ಅವರು ಇಲ್ಲ, ಆಸ್ಪತ್ರೆಯಲ್ಲಿರಬಹುದು. ಅವರ ಪ್ರಶ್ನೆಗೆ ಹೆಚ್.ಕೆ. ಪಾಟೀಲರು ಬಂದ ಮೇಲೆ ಉತ್ತರ ಅವರಿಗೆ ಆ House ನಲ್ಲಿ ಕೆಲಸ ಇದೆ. ಅವರು ಬರುತ್ತಾರೆ. Sorry ಕೃಷ್ಣಮೂರ್ತಿಯವರೇ, ನಿಮ್ಮ ಪ್ರಶ್ನೆಯನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ಬಿ. ಸೋಮಶೇಖರ್ : ವರ್ಗಾವಣೆ ಯಾಕೆ ಮಾಡಬೇಕು? ಸಂಬಂಧಪಟ್ಟ ಸಚಿವರಿಗೆ ಕೊಟ್ಟ ಮೇಲೆ ವರ್ಗಾವಣೆ ಏಕೆ?

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ ಇಂತಹ ಇಲಾಖೆ ಅಂತ ನಿಮಗೆ ಗೊತ್ತಿದ್ದರೆ ಮೇಲೆ ಬರದೇ ಬಿಡಿ.

ಶ್ರೀ ಬಿ. ಸೋಮಶೇಖರ್ : ಅದು ಸರ್ಕಾರದ ಜವಾಬ್ದಾರಿ ಸಂಬಂಧಪಟ್ಟ ಇಲಾಖೆಗೆ ಕಳುಹಿಸಿ ಉತ್ತರ ತರಿಸಬೇಕಾಗುತ್ತದೆ ಅವರು.

ಅಧ್ಯಕ್ಷರು : ನಮ್ಮ Secretariat ನವರೂ ತಪ್ಪು ಮಾಡುತ್ತಾರೆ ಇಲ್ಲ ಅಂತ ಅಲ್ಲ. ಕೃಷ್ಣಮೂರ್ತಿಗಳೇ ಬೆಳೆ ವಿಮೆ ಬಗ್ಗೆ ಬಂದಿರುವುದು, by mistake ಯಾವುದೋ ಇಲಾಖೆಗೆ ಹೋಗಿರುತ್ತದೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : ನಾನು ಕೃಷಿ ಸಚಿವರನ್ನೇ ಕೇಳಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಕೃಷ್ಣಮೂರ್ತಿಯವರ ಅದೃಷ್ಟ ಎಷ್ಟು ಚೆನ್ನಾಗಿದೆ ಅಂತ ಹೇಳಿದರೆ ಈ ಸದನದಲ್ಲಿ ಅವರ ಮೂರು ಪ್ರಶ್ನೆಗಳು ಬ್ಯಾಲೆಟ್‌ನಲ್ಲಿ ಎದ್ದರೂ ಇಲ್ಲಿಗೆ ಬಂದರೂ ಮೂರಕ್ಕು ಉತ್ತರ ಇಲ್ಲ ಅಂದರೆ ಅವರ ಕ್ಷೇತ್ರದ ಜನತೆಗೆ ಏನು ಸಂತೋಷವಾಗುತ್ತದೆ. ಕಾರಣಗಳೇನೇ ಇರಬಹುದು, ಈ ಬಾರಿ ಸದನದಲ್ಲಿ ಯಾವ ಪರಿಸ್ಥಿತಿ ಬಂತು ಅಂದರೆ ಮಾನ್ಯ ಹಿರಿಯ ಮಂತ್ರಿಗಳಿದ್ದೀರಿ, ದಯವಿಟ್ಟು ಯೋಚನೆ ಮಾಡಿ, ಚಂದ್ರೇಗೌಡರು ಮಾನ್ಯ ಅಧ್ಯಕ್ಷರಿಗೆ ಹೇಳುತ್ತಾರೆ ಯಾವ್ಯಾವ ಪ್ರಶ್ನೆಗೆ answer ಬೇಕು ಅಂತ Speaker ಇವರಿಗೆ ಬರೆದು ಕಳಿಸಬೇಕಂತೆ. ಆ ಮಟ್ಟಕ್ಕೆ ಹೋಗಿದೆ ಸರ್ಕಾರದವರಿಗೆ ಇದು ಗೊತ್ತಾಗುವುದಿಲ್ಲವಾ? ಕಣ್ಣುಕಿವಿ ಇಲ್ಲವಾ? ಮರೆವು ಜಾಸ್ತಿಯಾಗಿದೆಯಾ? ಏನ್ಸಾರ್ ಇದು?

ಅಧ್ಯಕ್ಷರು : ಸಂಬಂಧಪಟ್ಟ ಮಂತ್ರಿಗಳಿಗೆ ಕೂಡಲೇ ಕಳುಹಿಸಿರುತ್ತೇವೆ. ಅದ್ಯಾವಾಗ ಹೇಳಿದರೋ ನನಗೆ ಗೊತ್ತಿಲ್ಲ. ಆಯಿತು ಕೃಷ್ಣಮೂರ್ತಿಗಳೇ ನಿಮ್ಮದು ನೆಕ್ಸ್ಟ್ ಮುಂದಿನ ಶುಕ್ರವಾರ.

ಸಹಕಾರ ಬ್ಯಾಂಕುಗಳಿಂದ ಕೃಷಿ ಮತ್ತು ಕೃಷಿಯೇತರ ಬಾಬುಗಳಿಗೆ ಸಾಲ ನೀಡಿಕೆ

407 (3965) ಡಾ: ನಾರಾಯಣಪ್ಪ ಬಿ.ಡಿ (ಹೊಸನಗರ) ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ನೀಡಿದ ಸಾಲದ ಮೊತ್ತವೆಷ್ಟು (ದಿನಾಂಕ: 31.3.2003 ರವರೆಗೆ ಇದ್ದಂತೆ)

ಆ) ರಾಜ್ಯದಲ್ಲಿನ ಪಿ.ಎಲ್.ಡಿ.ಬಿ. ಅರ್ಬನ್ ಬ್ಯಾಂಕ್‌ಗಳು ಮತ್ತಿತರ ಸಂಸ್ಥೆಗಳು ಕೃಷಿ ಮತ್ತು ಕೃಷಿಯೇತರ ಚಟುವಟಿಗಳಿಗೆ ನೀಡಿದ ಸಾಲದ ಮೊತ್ತವೆಷ್ಟು (ದಿನಾಂಕ 31.3.2002 ರವರೆಗೆ ಇದ್ದಂತೆ)

ಇ) ಕೃಷಿ ಮತ್ತು ಕೃಷಿಯೇತರ ಸಾಲಗಳು ಬಾಕಿ ಉಳಿಯಲು ಕಾರಣಗಳೇನು, (ಬರ ಪರಿಸ್ಥಿತಿಯ ಹೊರತಾಗಿ)

ಈ) ಜಿಲ್ಲಾ ಸಹಕಾರ ಬ್ಯಾಂಕುಗಳಲ್ಲಿ ನಷ್ಟ ಹೊಂದಿರುವ ಬ್ಯಾಂಕುಗಳೆಷ್ಟು;

ಉ) ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತನ್ನು ತರಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ದಿವಾಕರಬಾಬು (ಸಹಕಾರ ರಾಜ್ಯ ಸಚಿವರು)

ಅ) ದಿನಾಂಕ: 31.3.2003ರ ಅಂತ್ಯಕ್ಕೆ ರಾಜ್ಯದಲ್ಲಿನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ನೀಡಿರುವ ಒಟ್ಟು ಸಾಲವು ರೂ. 360.76 ಕೋಟಿಗಳಾಗಿರುತ್ತದೆ. (ಈ ಪೈಕಿ ಕೃಷಿ ಸಾಲವು ರೂ. 2039.15 ಕೋಟಿ ಹಾಗೂ ಕೃಷಿಯೇತರ ಸಾಲವು ರೂ. 1631.61 ಕೋಟಿಗಳಷ್ಟಾಗಿರುತ್ತದೆ.

ಆ) ದಿನಾಂಕ: 31.3.2002 ರಂತ್ಯಕ್ಕೆ ರಾಜ್ಯದಲ್ಲಿನ ಪಿ.ಎಲ್.ಡಿ. ಬ್ಯಾಂಕು ಅರ್ಬನ್ ಬ್ಯಾಂಕು ಹಾಗೂ ಮತ್ತಿತರ ಸಂಸ್ಥೆಗಳು ಕೃಷಿ ಮತುನ್ತಿ ಕೃಷಿಯೇತರ ಚಟುವಟಿಗಳಿಗೆ ನೀಡಿದ ಸಾಲದ ಮೊತ್ತ ಅನುಕ್ರಮವಾಗಿ ರೂ. 117.70 ಕೋಟಿ ರೂ. 5145.67 ಕೋಟಿ ಮತ್ತು ರೂ. 9.55 ಕೋಟಿಗಳಷ್ಟಾಗಿರುತ್ತದೆ.

ಇ) ಕೃಷಿ ಮತ್ತು ಕೃಷಿಯೇತರ ಸಾಲುಗಳ ಬಾಕಿ ಉಳಿಯಲು ಉದ್ದೇಶಪೂರ್ವಕವಾಗಿ ಸಾಲ ಮರುಪಾವತಿಸದಿರುವುದು ಮತ್ತು ಕಾರಣಾಂತರಗಳಿಂದ ಸಾಲ ಪಡೆದ ಯೋಜನೆಗಳು ಕಾರ್ಯಗತಗೊಳ್ಳಲು ವಿಫಲವಾಗಿರುವುದು ಬಹುಮುಖ್ಯ ಕಾರಣವಾಗಿರುತ್ತದೆ.

ಈ) ದಿನಾಂಕ: 31.3.2003ರ ಅಂತ್ಯಕ್ಕೆ ರಾಜ್ಯದಲ್ಲಿನ 21 ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ಪೈಕಿ 9 ಜಿಲ್ಲಾ ಬ್ಯಾಂಕ್‌ಗಳು ನಷ್ಟವನ್ನು ಅನುಭವಿಸುತ್ತಿವೆ.

ಉ) ನಬಾರ್ಡ್ ಹಾಗೂ ಆರ್.ಬಿ.ಐ. ಸೂಚನೆಗಳ ಚೌಕಟ್ಟಿನಲ್ಲಿ ಸಾಲ ಮಂಜೂರು ಮಾಡಲು ಮತ್ತು ಸಾಲ ವಸೂಲಾತಿಯನ್ನು ಚುರುಕುಗೊಳಿಸಲು ಕ್ರಮವಿಡಲಾಗಿದೆ.

ಡಾ: ಜಿ.ಡಿ. ನಾರಾಯಣಪ್ಪ : ಅಧ್ಯಕ್ಷರೇ, ನನ್ನ ಪ್ರಶ್ನೆ ನೇರವಾಗಿ ಸಹಕಾರ ಸಚಿವರಿಗೆ ಸಂಬಂಧಿಸಿದ್ದು, ಆದರೆ ಅವರು ಇಲ್ಲ, ಉತ್ತರ ಹೇಗೆ ನಿರೀಕ್ಷಿಸಲಿ. ಆಯಿತು, ಉತ್ತರ ಒದಗಿಸಿದ್ದಾರೆ, ಮೊದಲನೇ ಮತ್ತು ಎರಡನೇ ಪ್ರಶ್ನೆಗೆ ಅಂಕಿ ಅಂಶದ ವಿವರಣೆ ಕೊಟ್ಟಿದ್ದಾರೆ ನಾನು ಅದರ ಬಗ್ಗೆ ವಿವರಣೆಗೆ ಹೋಗುವುದಿಲ್ಲ. ಆದರೆ ಮೂರನೇ ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ ಉದ್ದೇಶಪೂರ್ವಕವಾಗಿ ಸಾಲ ಮರುಪಾವತಿ ಮಾಡದೇ ಇರಬಹುದು ಎಂದು ಇದೆ. ನನಗೆ ತಿಳಿದ ಮಟ್ಟಿಗೆ ಯಾವುದೇ ಸಹಕಾರ ಸಂಘ ಇತ್ಯಾದಿಗಳಲ್ಲಿ ಕೇಳಿದಾಗ, 93, 95% ಸಾಲ ವಸೂಲಾಗಿದೆ ಎನ್ನುತ್ತಾರೆ, ಆದರೆ ಹಣದ ರೂಪದಲ್ಲಿಲ್ಲ ಅಲ್ಲಿ book adjustment ಅನ್ನುತ್ತಾರೆ. Book adjustment ಅಂದರೆ ಅರ್ಥವಾಗುತ್ತಾ ಇಲ್ಲ ಬುಕ್‌ಗಳಿವೆ, ಹಣ ಇಲ್ಲ ಬ್ಯಾಂಕಿನಲ್ಲಿ ಈ ತರಹ ನಷ್ಟ ಅನುಭವಿಸುವ ಬಹಳಷ್ಟು ಸಹಕಾರಿ ಸಂಸ್ಥೆಗಳಿವೆ. ಅದರ ಜೊತೆಗೆ 4ನೇ ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ ಇಷ್ಟೊಂದು ಬ್ಯಾಂಕ್‌ಗಳು ನಷ್ಟ ಅನುಭವಿಸಬೇಕಾದರೆ ಎಂತಹ ಪರಿಸ್ಥಿತಿ ಇರಬಹುದು, ಇದು ಎಲ್ಲಿ ಏನಾಗಿದೆ ಎಂದು ಕೂಲಂಕಷ ಸರ್ಕಾರದ ಗಮನಕ್ಕೆ ತಂದು ತನಿಖೆ ಮಾಡಿಸಿ ಈ ನಷ್ಟ ಸರಿದೂಗಿಸುವ ಕೆಲಸ ಆಗಲಿ ಎಂಬುದು ನನ್ನ ಮುಖ್ಯ ಉದ್ದೇಶ.

ಅಧ್ಯಕ್ಷರು : ಪ್ರಶ್ನೆ ಕೇಳಿ ಎಂದರೆ ಭಾಷಣ ಮಾಡುತ್ತೀರಿ. ಸಚಿವರೇ ಉತ್ತರ ಕೊಡಿ.

ಶ್ರೀ ಎಂ. ದಿವಾಕರ ಬಾಬು (ಸಹಕಾರ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, 21 ಡಿಸಿಸಿ ಬ್ಯಾಂಕ್‌ಗಳಲ್ಲಿ 9 ಬ್ಯಾಂಕ್‌ಗಳು ನಷ್ಟದಲ್ಲಿದ್ದಾವೆ. ಅದರಲ್ಲಿ ಮೂರು ಪರ್ಮನೆಂಟ್ ಲಾಸ್‌ನಲ್ಲಿವೆ. ಇನ್ನು ಆರು ಬ್ಯಾಂಕುಗಳು ಇಂಟರೆಸ್ಟ್ ಅಡ್ಜಸ್ಟ್‌ಮೆಂಟ್‌ನಿಂದ ಸ್ವಲ್ಪ ಡಿಲೇಯಾಗುತ್ತಿದೆ. ಇಲ್ಲದಿದ್ದರೆ ಅವುಗಳೂ ಪ್ರಾಫಿಟ್‌ನಲ್ಲಿ ಬರುತ್ತವೆ. ಈ ವೇವರ್ ಆಫ್ ಇಂಟರೆಸ್ಟ್ ಆದತಕ್ಷಣ ಲಾಭಕ್ಕೆ ಬರುತ್ತವೆ. ಇನ್ನು ಮುಂದೆ ಅವುಗಳನ್ನು ಸರಿಪಡಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಜಿಲ್ಲಾ ಸಹಕಾರ ಬ್ಯಾಂಕುಗಳಲ್ಲಿ ನಷ್ಟ ಹೊಂದಿರುವ ಬ್ಯಾಂಕುಗಳೆಷ್ಟು ಎಂದು ಇಲ್ಲಿ ಮಾನ್ಯ ಸಚಿವರು ಹೇಳಿದರು. ಅದರಲ್ಲಿ ಒಂಭತ್ತು ಜಿಲ್ಲಾ ಬ್ಯಾಂಕುಗಳು ನಷ್ಟವನ್ನು ಅನುಭವಿಸುತ್ತಿವೆ ಎನ್ನುವ ಮಾತನ್ನು ಹೇಳಿದರು. ಬಹುಶಃ ಅದರಲ್ಲಿ ಧಾರವಾಡದ ಕೆಸಿಸಿ ಬ್ಯಾಂಕೂ ಇರಬಹುದು. ಆ ಒಂಭತ್ತರಲ್ಲಿ. ನೀವೂ ಕೂಡ ಧಾರವಾಡಕ್ಕೆ ಬಂದು ಹೋಗಿದ್ದೀರಿ. ಮಾನ್ಯ ವಿಶ್ವನಾಥ್‌ರವರು ಒಂದು ಸಂದರ್ಭದಲ್ಲಿ ಬಂದು ಹೋಗಿದ್ದಾರೆ. ಒಂದು ಏನಾಗಿದೆ ಎಂದರೆ ಅಲ್ಲಿ ಮಾನ್ಯ ವಿಶ್ವನಾಥ್‌ರವರು ಬಂದಂಥ ಸಂದರ್ಭದಲ್ಲಿ ಆ ಕೆಸಿಸಿ ಬ್ಯಾಂಕಿನ ಪುನರುಜ್ಜೀವನದ ಸಲುವಾಗಿ 50 ಕೋಟಿ ರೂ ಹಣ ಅಪೆಕ್ಸ್ ಬ್ಯಾಂಕ್‌ನಿಂದ ಸಾಲ ಕೊಡುತ್ತೇವೆನ್ನುವಂಥ ಮಾತನ್ನು ಹೇಳಿದ್ದರು. ಮತ್ತು ಮೂವತ್ತು ಕೋಟಿ ರೂ.ನ ಗ್ಯಾಪ್ ಅಮೌಂಟ್‌ನ್ನು ಕೊಡುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದರು. ಇಲ್ಲಿಯವರೆಗೂ ಸರ್ಕಾರದ ಕಡೆಯಿಂದ ಇವತ್ತೇನು ಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರು, ಆ ಭರವಸೆ ಇವತ್ತು ಈಡೇರಿಲ್ಲ. ಹೀಗಾಗಿ ಏನಾಗಿದೆ ಎಂದರೆ ಆ ಕೆಸಿಸಿ ಬ್ಯಾಂಕ್ ನಷ್ಟ ಆ ಅನುಭವಿಸುವುದಕ್ಕೆ ಕಾರಣವೇನು, ಅದಕ್ಕೊಂದು ದೊಡ್ಡ ಇತಿಹಾಸವಿದೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾರ್‍ಯಾರಿಗೋ ತಮಗೆ ಬೇಕಾದಂಥವರಿಗೆ ಸೆಕ್ಯೂರಿಟಿಯೇ ಇಲ್ಲದೆ ಲೋನನ್ನು ಕೊಟ್ಟಿರತಕ್ಕದ್ದು, ತಮ್ಮ ರಾಜಕೀಯ ಹಿತಾಸಕ್ತಿ, ಬೇರೆ ಬೇರೆ ಹಿತಾಸಕ್ತಿ ಸಲುವಾಗಿ ಸಾಲವನ್ನು ಕೊಟ್ಟಿದ್ದು, ಕೃಷಿಯೇತರ ಸಲುವಾಗಿ ಸಾಲವನ್ನು ಕೊಟ್ಟಿದ್ದು, ಇದರ ಸಲುವಾಗಿ ಇವತ್ತು ಆ ಕೆಸಿಸಿ ಬ್ಯಾಂಕು ಅಧೋಗತಿಗೆ ಬಂದಿದೆ. ಏಕೆಂದರೆ ಧಾರವಾಡ ಜಿಲ್ಲೆ ಸಹಕಾರಿ ರಂಗಕ್ಕೆ ಇಂಬುಕೊಟ್ಟಂಥದ್ದು. ಅಲ್ಲಿಂದಲೇ ಸಹಕಾರಿ ಚಳುವಳಿ ಪ್ರಾರಂಭವಾಗಿದ್ದು ಧಾರವಾಡ ಜಿಲ್ಲೆಯಿಂದಲೇ. ಆದರೆ ಅಲ್ಲಿ ಇವತ್ತು ಕೆಸಿಸಿ ಬ್ಯಾಂಕು ಅಧೋಗತಿಗೆ ಬಂದಿದೆ. ಅದರ ಜೊತೆಗೆ ಇವತ್ತು ಧಾರವಾಡ ಜಿಲ್ಲೆಯಲ್ಲಿರುವಂಥ ಏನು ಕೋ-ಆಪರೇಟಿವ್ ಅರ್ಬನ್ ಬ್ಯಾಂಕುಗಳು ಇದ್ದಾವೆ, ಅವುಗಳೂ ಸಹಿತ ಇವತ್ತು ಮುಳುಗುವಂಥ ಪರಿಸ್ಥಿತಿ ಬಂದಿದೆ. ಏಕೆಂದರೆ ಅವರೇನು ಇಲ್ಲಿ ಕೆಸಿಸಿ ಬ್ಯಾಂಕ್‌ನಲ್ಲಿ ಡಿಪಾಸಿಟ್ ಇಟ್ಟಿದ್ದಾರೆ, ಆ ಡಿಪಾಸಿಟ್ ವಾಪಸ್ ಬರುತ್ತಿಲ್ಲ. ಈಗ ಇವೆಲ್ಲಾ ತೊಂದರೆ ಇರುವುದರಿಂದ ನೀವು ತಕ್ಷಣವೇ ಇವತ್ತು ಏನಾದರೂ ಸರ್ಕಾರ ಒಂದು ಆರ್ಥಿಕ ನೆರವನ್ನು ಕೊಟ್ಟರೆ ಆ ಕೆಸಿಸಿ ಬ್ಯಾಂಕುಗಳು ಬದುಕುತ್ತವೆ. ಅದರ ಜೊತೆಗೆ ನೂರಾರು ಕೋ-ಆಪರೇಟಿವ್ ಅರ್ಬನ್ ಬ್ಯಾಂಕ್ಸ್ ಮತ್ತು ಅದರ ಜೊತೆಗೆ ಇದ್ದಂಥ ಸೊಸೈಟಿಗಳು ಬದುಕುವುದಕ್ಕೆ ಸಾಧ್ಯ ಇದೆ. ಹೀಗಾಗಿ ಇದರ ಬಗ್ಗೆ ಸರ್ಕಾರ ನೀವೇನು ಭರವಸೆಯನ್ನು ಕೊಟ್ಟಿದ್ದಿರಿ, ಅಲ್ಲಿ ಬಂದು ಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದೀರಿ, ಅಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಭರವಸೆಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ನಡೆದುಕೊಳ್ಳುವುದಕ್ಕೆ ಆಗುತ್ತದೋ ಇಲ್ಲವೋ? ಇದರ ಬಗ್ಗೆ ಕೆಸಿಸಿ ಬ್ಯಾಂಕ್‌ನ ಪುನರುಜ್ಜೀವನ ಸಲುವಾಗಿ ಏನು ಮಾಡುತ್ತೀರಿ? ದಯವಿಟ್ಟು ಅದಕ್ಕೆ ಒಂದು ಸ್ಪಷ್ಟೀಕರಣವನ್ನು ನಾನು ಸರ್ಕಾರದ ಕಡೆಯಿಂದ ಬಯಸುತ್ತಿದ್ದೇನೆ.

ಶ್ರೀ ಎಂ. ದಿವಾಕರ ಬಾಬು : ಮಾನ್ಯ ಅಧ್ಯಕ್ಷರೆ, ಧಾರವಾಡ ಡಿಸಿಸಿ ಬ್ಯಾಂಕ್‌ನ ಇತಿಹಾಸ ಬಹಳಷ್ಟು ದೊಡ್ಡದು. ಅದು ಬಹಳಷ್ಟು ಹೆವಿ ಲಾಸ್‌ನಲ್ಲಿದೆ. ಅದನ್ನು ಪುನರ್‌ರಚನೆ ಮಾಡಬೇಕಾದರೆ ಸರ್ಕಾರ ಅದಕ್ಕೆ ಎರಡು-ಮೂರು ಸಾರಿ ಸಹಾಯವನ್ನು ಮಾಡಿದೆ. ಮತ್ತೆ ಈಗಿನ ಪರಿಸ್ಥಿತಿಯಲ್ಲಿ ಸಹಾಯ ಮಾಡಬೇಕಾದರೆ ಸುಮಾರು ಐವತ್ತು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ 50 ಕೋಟಿ ರೂಗೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ಆದರೆ ಅಪೆಕ್ಸ್ ಬ್ಯಾಂಕ್‌ನವರು ಅವರೇನು ಹಣವನ್ನು ಕೊಡುತ್ತಾರೆಂದು ನಾವು ಅಂದು ಕೊಂಡಿದ್ದೆವು, ಅವರು ಹಿಂದಿನ ಸಾಲವನ್ನು ಧಾರವಾಡ ಡಿಸಿಸಿ ಬ್ಯಾಂಕ್‌ನವರು ಪಾವತಿ ಮಾಡಿದರೆ ನಾವು ಕೊಡುತ್ತೇವೆನ್ನುವ ಒಂದು ಕಂಡೀಷನನ್ನು ಇಟ್ಟರು. ಅದಕ್ಕಾಗಿ ಪೆಂಡಿಂಗ್ ಆಗಿದೆ. ಬೇರೆ ಬ್ಯಾಂಕುಗಳ ಪರಿಸ್ಥಿತಿಯೂ ಚೆನ್ನಾಗಿಲ್ಲ. ನಾವು ಸ್ಕೀಮಿನ ಪ್ರಕಾರ ಎಲ್ಲಾ ಡಿಸಿಸಿ ಬ್ಯಾಂಕುಗಳಿಂದ ಹಣವನ್ನು ಸಂಕೀರ್ಣ ಮಾಡಿ ಕೊಡಬೇಕೆನ್ನುವಂಥ ಒಂದು ಸ್ಕೀಮ್ ಇತ್ತು. ಆದರೆ ಬೇರೆ ಡಿಸಿಸಿ ಬ್ಯಾಂಕ್‌ಗಳವರು ಒಪ್ಪುತ್ತಿಲ್ಲ. ಅದಕ್ಕಾಗಿ ಸ್ವಲ್ಪ ಡಿಲೇಯಾಗುತ್ತಿದೆ. ಈ ಸ್ಕೀಮಿನ ಬಗ್ಗೆ ಇನ್ನೂ ಪರಿಶೀಲನೆಯಲ್ಲಿದೆ. ಈಗಾಗಲೇ ಅಪೆಕ್ಸ್ ಬ್ಯಾಂಕ್‌ನಿಂದ ಡೈರೆಕ್ಟ್ ಲೋನ್ಸ್‌ಗೆ ಅಸಿಸ್ಟೆನ್ಸ್‌ನ್ನು ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನಿಂದ ಮಾಡುತ್ತಿದ್ದೇವೆ. ಅದು ಈಗಾಗಲೇ 7.26 ಕೋಟಿ ಲೋನನ್ನು ಕೊಟ್ಟಿದ್ದೇವೆ. ಧಾರವಾಡ ಅರ್ಬನ್ ಬ್ಯಾಂಕ್ಸ್‌ಗೆ. ಇದನ್ನು ಮುಂದೆ ಹಂತ ಹಂತವಾಗಿ ಪರಿಶೀಲನೆ ಮಾಡಿ ಆ ಬ್ಯಾಂಕ್‌ನ್ನು ಪುನರ್‌ರಚನೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚಿಂತನೆ ಮಾಡಿ. ಕೆಸಿಸಿ ಬ್ಯಾಂಕ್‌ನ ಸಲುವಾಗಿ ಡೆಲಿಗೇಷನ್ ಹೋಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳೂ ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತಿದ್ದಾರೆ. ನೀವು ಈ ವಿಷಯವನ್ನೆಲ್ಲಾ ಹೇಳುವುದಾದರೆ ಅದಕ್ಕೇನಾದರೂ ಒಂದು ದಾರಿಯನ್ನು ಹುಡುಕಬಹುದು.

ಶ್ರೀ ಜೆ.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಡಿಸಿಸಿ ಬ್ಯಾಂಕು ಬಹಳಷ್ಟು ಪ್ರಾಮುಖ್ಯವಾದ ಸಂಸ್ಥೆ. ಬಹುಶಃ ಈ ಕೋ-ಆಪರೇಟಿವ್ ಮೂವ್‌ಮೆಂಟ್ ಹುಟ್ಟಿದ್ದೇ ಧಾರವಾಡ ಜಿಲ್ಲೆಯಲ್ಲಿ. ಇವತ್ತು ಅಂಥ ಪರಿಸ್ಥಿತಿಯಲ್ಲಿ ಧಾರವಾಡ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಕೋ-ಆಪರೇಟಿವ್ ಮೂವ್‌ಮೆಂಟ್ ನಶಿಸಿ ಹೋಗುತ್ತಿದೆ. ಅದರ ವಿಚಾರದಲ್ಲಿ ಈಗಾಗಲೇ ಮಾನ್ಯ ಸಚಿವರು ಹೇಳಿದರು. ಅಪೆಕ್ಸ್ ಬ್ಯಾಂಕ್ ಮುಖಾಂತರ 50 ಕೋಟಿ ರೂಪಾಯಿಗಳನ್ನು ಕೆಸಿಸಿ ಬ್ಯಾಂಕ್‌ನ್ನು ಪುನಶ್ಚೇತನ ಮಾಡುವುದಕ್ಕೆ ಕೊಡುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದರೆಂದು ಹೇಳಿ. ಆದರೆ ಅಪೆಕ್ಸ್ ಬ್ಯಾಂಕ್‌ನವರು ಏನು ಮಾಡಿದರು ಎಂದರೆ ಸರ್ಕಾರ ಗ್ಯಾರಂಟಿ ನೀಡಿದರೆ ಮಾತ್ರ ಕೊಡುತ್ತೇವೆಂದು ಹೇಳಿದರು. ಆದರೆ ಸರ್ಕಾರ ಗ್ಯಾರಂಟಿ ನೀಡುವಲ್ಲಿ ಹಿಂದೇಟು ಹಾಕಿದೆ. ಅದಕ್ಕೆ ಇವತ್ತು ಅಲ್ಲಿರತಕ್ಕ ಎಲ್ಲಾ ಸಹಕಾರಿ ಸಂಸ್ಥೆಗಳು ಬಹಳ ಕಷ್ಟದಲ್ಲಿದ್ದಾವೆ. ಅದಕ್ಕೆ ಅದರ ಬಗ್ಗೆ ಸರ್ಕಾರ ನಿಗಾ ವಹಿಸಬೇಕು. ಅಲ್ಲಿ ಸಹಕಾರಿ ಚಳುವಳಿ ಕೂಡ ಧಾರವಾಡ ಜಿಲ್ಲೆಯಾದ್ಯಂತ ಪ್ರಾರಂಭವಾಗುತ್ತದೆ ಎನ್ನುವಂಥ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಎಂ. ದಿವಾಕರ ಬಾಬು : ಮಾನ್ಯ ಅಧ್ಯಕ್ಷರೇ, ಪ್ಯಾಕೇಜ್ ಪ್ರಕಾರ ಈಗಾಗಲೇ ನಾವು 7.26 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಅಪೆಕ್ಸ್ ಬ್ಯಾಂಕ್‌ಗೆ ಅವರು ಹೇಳಿದಹಾಗೆ ಸರ್ಕಾರ ಗ್ಯಾರಂಟಿ ಕೊಡಬೇಕೆಂದು ಕೇಳಿದ್ದಾರೆ. ಈಗಾಗಲೇ ಅಪೆಕ್ಸ್ ಬ್ಯಾಂಕ್ ಕ್ರೆಡಿಟ್ ಲಿಮಿಟ್‌ನ್ನು

75 ಕೋಟಿ ರೂಪಾಯಿಗೆ ಕೆಸಿಸಿ ಬ್ಯಾಂಕ್‌ಗೆ ಕೊಟ್ಟಿದೆ. ಗ್ಯಾರಂಟಿ ಕೊಡುವುದರ ಬಗ್ಗೆಯೂ ಪರಿಶೀಲನೆಯಲ್ಲಿದೆ. ಅದನ್ನು ಮಾಡುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಆರಗ ಜ್ಞಾನೇಂದ್ರ ಮತ್ತು ಮಾನ್ಯ ಶ್ರೀನಿವಾಸಗೌಡರವರು ಮಾತ್ರ ಪ್ರಶ್ನೆ ಕೇಳಿ.

ಶ್ರೀ ಜಗದೀಶ್ ಶೆಟ್ಟರ್ : ಮತ್ತೆ ಇವತ್ತೇನಾದರೂ ಡೆಲಿಗೇಷನ್ ಬರುತ್ತಿದೆಯೇ? ಅದರ ಬಗ್ಗೆ ಏನಾದರೂ ಮೀಟಿಂಗ್ ಇದೆಯೋ? ಹೇಗೆ?

ಶ್ರೀ ಎಂ. ದಿವಾಕರ ಬಾಬು : ಮಾನ್ಯ ಅಧ್ಯಕ್ಷರೇ, ಕ್ರೆಡಿಟ್ ಲಿಮಿಟ್ಸ್‌ನ್ನು ಕೊಟ್ಟಿದೆ.

ಶ್ರೀ ಜಗದೀಶ್ ಶೆಟ್ಟರ್ : ಕ್ರೆಡಿಟ್ ಲಿಮಿಟ್ಸ್ ಅದೇನು ಪ್ರಯೋಜವಾಗುವುದಿಲ್ಲ. ಈ ಗ್ಯಾಪ್ ಅಮೌಂಟ್ ಮತ್ತು ಅಪೆಕ್ಸ್ ಬ್ಯಾಂಕ್‌ನಿಂದ ಏನಾದರೂ ನೆರವು ಕೊಟ್ಟಿದ್ದರೆ ಏನಾದರೂ ಆಗಲಿಕ್ಕೆ ಸಾಧ್ಯ ಇದೆ. ಏಕೆಂದರೆ ಪೂರ್ತಿ ಮುಚ್ಚಿಹೋಗುತ್ತದೆ. ಕೆಸಿಸಿ ಬ್ಯಾಂಕ್ ಒಂದೇ ಅಲ್ಲ. ಇಡೀ ಧಾರವಾಡ ಜಿಲ್ಲೆಯಲ್ಲಿ ಪೂರ್ತಿ ಸಹಕಾರ ಸಂಸ್ಥೆಗಳು ಮುಚ್ಚಿಹೋಗುತ್ತವೆ. ಆ ಪರಿಸ್ಥಿತಿ ಇದೆ. ಇದಕ್ಕೇನಾದರೂ ಒಂದು ಸಭೆ ಕರೆದು ನಿರ್ಣಯವನ್ನು ಕೈಗೊಳ್ರಿ. ಅದರ ಬಗ್ಗೆಯಾದರೂ ಭರವಸೆ ಕೊಡಿ. ಜನಪ್ರತಿನಿಧಿಗಳನ್ನು ಕರೆದು ಇದಕ್ಕೇನಾದರೂ ಒಂದು ಪರಿಹಾರವನ್ನು ಹುಡುಕುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟರೆ ಒಳ್ಳೆಯದು.

ಶ್ರೀ ಎಂ. ದಿವಾಕರ ಬಾಬು : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ಹಾಗೆ ವಿರೋಧ ಪಕ್ಷದ ನಾಯಕರನ್ನು ಮತ್ತು ಎಲ್ಲರನ್ನೂ ಕರೆಸಿ ಒಂದು ಚರ್ಚೆಯನ್ನು ಮಾಡಿ ಅದನ್ನು ಹೇಗೆ ಪುನಶ್ಚೇತನ ಮಾಡಬೇಕೆನ್ನುವ ಬಗ್ಗೆ ಫೈನ್‌ರೈಜ್ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಜ್ಞಾನೇಂದ್ರರವರು. ಮಾನ್ಯ ಕೃಷ್ಣಮೂರ್ತಿಯವರೆ, ಇನ್ನೂ ಎಂಟು ಪ್ರಶ್ನೆಗಳಿವೆ. How can I manage? tell me.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಎಷ್ಟೇ ಕಮರ್ಷಿಯಲ್ ಬ್ಯಾಂಕ್‌ಗಳು ಇವತ್ತು ಇದ್ದರೂ ಕೂಡ ನಮ್ಮ ಸಹಕಾರಿ ಸಂಸ್ಥೆಗಳೇ ನಮ್ಮ ಗ್ರಾಮೀಣ ಬದುಕಿನ ಜೀವಾಳ. ಅವುಗಳು ಗಟ್ಟಿ ಇದ್ದರೆ ರೈತ ಗಟ್ಟಿ ಇರುತ್ತಾನೆ. ಅವು ಸೊರಗಿದರೆ ರೈತನ ಬದುಕು ಸೊರಗುತ್ತದೆ. ಈ ಹಿನ್ನೆಲೆಯಲ್ಲಿ .ತಾವು ಕೊಟ್ಟಂಥ ಉತ್ತರವನ್ನು ನಾನು ನೋಡಿದೆ. ಮಾನ್ಯ ಸದಸ್ಯರು ಡಾ: ಜಿ.ಡಿ. ನಾರಾಯಣಪ್ಪನವರು ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತನ್ನು ತರಲು ಸರ್ಕಾರ ಕೈಗೊಂಡ ಕ್ರಮವೇನು ಎಂಬ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ ನಬಾರ್ಡ್ ಮತ್ತು ಆರ್‌ಬಿಐ ಸೂಚನೆಗಳನ್ನು ಚೌಕಟ್ಟಿನಲ್ಲಿ ಬಹಳ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಂಡಿದ್ದೇವೆ' ಎಂದು ಹೇಳುತ್ತಿದ್ದೀರಿ. ಈ ಸಹಕಾರಿ ಸಂಸ್ಥೆಗಳು ಬಿದ್ದುಹೋಗಲಿಕ್ಕೆ ಸರ್ಕಾರ ಅಪ್ರತ್ಯಕ್ಷವಾಗಿ ಕಾರಣವಾಗಿದೆ. ಇತ್ತೀಚೆಗೆ ಶಿವಮೊಗ್ಗ ಡಿಸಿಸಿ ಬ್ಯಾಂಕ್‌ಗೆ ಸುಮಾರು 55 ಜನರನ್ನು ಹೊಸದಾಗಿ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಆದೇಶವನ್ನು ಕೊಟ್ಟಿದ್ದೀರಿ. ಅನುಮತಿಯನ್ನು ಕೊಟ್ಟಿದ್ದೀರಿ. ಇವತ್ತು ಕಂಪ್ಯೂಟರ್‌ಗಳು ಬಂದಿದ್ದಾವೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಎಂಪ್ಲಾಯೀಸ್‌ನ್ನು ಹೊರಗೆ ಹಾಕುತ್ತಿದ್ದಾರೆ. ಇವತ್ತು ವಿ.ಆರ್.ಎಸ್.ನ್ನು ಕೊಟ್ಟು ಹೊರಗೆ ಕಳುಹಿಸುತ್ತಿದ್ದಾರೆ. ಕೋ-ಆಪರೇಟಿವ್ ಬ್ಯಾಂಕ್‌ಗಳು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವ ಕಾರ್ಖಾನೆಗಳಲ್ಲ. ಹಾಗಾಗಿ ಇವತ್ತು ನಷ್ಟಕ್ಕೆ ಗುರಿಯಾಗಲಿಕ್ಕೆ ಇದೂ ಒಂದು ಕಾರಣ.

ಅಧ್ಯಕ್ಷರು : ಒಬ್ಬೊಬ್ಬರೂ ಐದೈದು ನಿಮಿಷ ಕೇಳಿದರೆ ಹೇಗೆ? ನೀವೇ ಹೇಳಿ.

ಶ್ರೀ ಆರಗ ಜ್ಞಾನೇಂದ್ರ : ಬಹಳ ಇಂಪಾರ್ಟೆಂಟ್. ಇದು ರೈತರ ಬ್ಯಾಂಕಲ್ಲವೇ? ಸಾರ್.

ಅಧ್ಯಕ್ಷರು : ರೈತರದು ಎಲ್ಲಾ ಇಂಪಾರ್ಟೆಂಟೇ. ನಮ್ಮ ಮುಂದೆ ಎಂಟು ಪ್ರಶ್ನೆಗಳಿವೆ. ಎಷ್ಟು ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡೋಣ ಹೇಳಿ.

ಶ್ರೀ ಆರಗ ಜ್ಞಾನೇಂದ್ರ : ಮುಗಿಸಿಬಿಡುತ್ತೇನೆ ಸಾರ್. ಶಿವಮೊಗ್ಗ ಡಿಸಿಸಿ ಬ್ಯಾಂಕ್‌ನಲ್ಲಿ ನೀವೊಬ್ಬರು ಅಡಿಟರ್‌ನ್ನು ಹಾಕಿದಿರಿ. ನೇಮಕ ಮಾಡಿದಿರಿ. ಈ ಆಡಿಟರ್ ಬೇಡ, ಇನ್ಯಾರೋ ಆಡಿಟರನ್ನು ಕೊಡಿ ಎಂದು ಹೇಳಿ ನಿರ್ಣಯ ಮಾಡುತ್ತಿದ್ದಾರೆ. ಏನು ಆಡಳಿತ ಮಂಡಳಿಗೆ ಬೇಕಾದಂಥ ಆಡಿಟರನ್ನು ಹಾಕಿಕೊಂಡು ಹೋಗಲಿಕ್ಕೆ ಅವಕಾಶ ಇದೆಯೇನು? ಆಡಿಟರನ್ನು ಕೂಡ ಸರ್ಕಾರ ಸರಿಯಾಗಿ ಹಾಕುವುದಕ್ಕೆ ಅವಕಾಶ ಇಲ್ಲ. ಈ ರೀತಿಯಾದರೆ ಇವುಗಳು ನಷ್ಟ ಹೊಂದದೆ ಇನ್ನೇನಾಗುತ್ತದೆ ಸ್ವಾಮಿ? ಕೆಲವರು ಪಟ್ಟಭದ್ರಹಿತಾಸಕ್ತಿಗಳು ಕುಳಿತುಕೊಂಡು ಆಡಿಟ್ ಇಲ್ಲ, ಲೆಕ್ಕ ಕೇಳಬಾರದು, ಎಂದರೆ ಮುಳುಗಿ ನೀರು ಕುಡಿದು ಹೋಗುತ್ತವೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ಎಚ್ಚರಿಕೆಯಿಂದ ಗಮನಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ: ಜಿ.ಡಿ. ನಾರಾಯಣಪ್ಪ : ಮಾನ್ಯ ಅಧ್ಯಕ್ಷರೇ, ಬುಕ್ ಅಡ್ಜಸ್ಟ್‌ಮೆಂಟ್ ಅಂದರೆ ಏನು ಎಂದು ಪ್ರಶ್ನೆ ಕೇಳಿದೆ. ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ.

ಶ್ರೀ ಎಂ. ದಿವಾಕರ ಬಾಬು : ಬುಕ್ ಅಡ್ಜಸ್ಟ್‌ಮೆಂಟ್ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ಬುಕ್ ಅಡ್ಜಸ್ಟ್‌ಮೆಂಟ್ ಮಾಡಿ ಮಾಡಿಯೇ ಈ ಬ್ಯಾಂಕುಗಳು ಇಲ್ಲಿಯವರೆಗೂ ಬಂದಿದ್ದಾವೆ. ಈಗ ಮಾಡುತ್ತಿಲ್ಲ. ಇದನ್ನು ನಿಲ್ಲಿಸಿದ್ದಕ್ಕೆ ಇವೆಲ್ಲಾ ಹೊರಗೆ ಬರುತ್ತಾ ಇದೆ.

ಅಧ್ಯಕ್ಷರು : ಮಾನ್ಯ ಚೆನ್ನಿಗಪ್ಪನವರೇ, ತಮ್ಮ ಪ್ರಶ್ನೆಗೆ 15 ದಿವಸ ಟೈಮ್ ಕೇಳಿದ್ದಾರೆ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ರೈತರ ಸಮಸ್ಯೆ ಇದು.

ಅಧ್ಯಕ್ಷರು : ನಾನೂ ರೈತನೇ. ನೀವೂ ರೈತರೇ. ನನಗೂ ಗೊತ್ತಿದೆ. ಅವರ ಕಷ್ಟ.

ಶ್ರೀ ಸಿ. ಚನ್ನಿಗಪ್ಪ : ಉತ್ತರ ಇಲ್ಲ ಎಂದರೆ ಏನು ಮಾಡಬೇಕು?

ಅಧ್ಯಕ್ಷರು : ಉತ್ತರ ಕೊಡುತ್ತಾರೆ. ಸ್ವಲ್ಪ ತಾಳ್ಮೆಯಿಂದ ಇರಿ.

ಶ್ರೀ ಸಿ. ಚೆನ್ನಿಗಪ್ಪ : ರೈತರ ಸಮಸ್ಯೆ ಇದೆ.

ಅಧ್ಯಕ್ಷರು : ನಾನೂ ರೈತನೇ, ನೀವೂ ರೈತರೇ. ನನಗೂ ರೈತರ ಕಷ್ಟ ಗೊತ್ತಿದೆ.

ಶ್ರೀ ಸಿ. ಚೆನ್ನಿಗಪ್ಪ : ರೈತರ ಮಟ್ಟಿಗೆ ಇಷ್ಟೊಂದು ಉದಾಸೀನವೇ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ತೆಂದಿನ ಮರಗಳಿಗೆ ನುಸಿ ರೋಗ ಬಂದಿದೆ. ಈ ವಿಚಾರದಲ್ಲಿ ಕೇಳುವಂತಹ ಪ್ರಶ್ನೆಗೂ ಕೂಡ ನುಸಿ ರೋಗ ಬಂದರೆ ಗತಿ ಹೇಗೆ?

ಅಧ್ಯಕ್ಷರು : ಮಾನ್ಯ ಚೆನ್ನಿಗಪ್ಪನವರದ್ದು ಬೇರೆ ಪ್ರಶ್ನೆ.

ಶ್ರೀ ಸಿ. ಬೈರೇಗೌಡ : ಅದಕ್ಕೆ ಒಳ್ಳೆಯ ಔಷಧಿ ಸಿಂಪರಣೆ ಮಾಡುವಂತಹ ವ್ಯವಸ್ಥೆ ದಯವಿಟ್ಟು ಮಾಡಿ.

ಅಧ್ಯಕ್ಷರು : ಆಯಿತು. ಮಾನ್ಯ ಚೆನ್ನಿಗಪ್ಪನವರ ಪ್ರಶ್ನೆಗೆ ಉತ್ತರವನ್ನು ಆದಷ್ಟು ಬೇಗನೇ ತರಿಸೋಣ.